ಬಂದೋರು ಹೋಗೋಹಂಗಿಲ್ಲ, ಇವರ ಅನುಮತಿ ಪತ್ರ ಇಲ್ಲದ. ಹಿಂಗ ಇರೊಂಥಾ ಸಾಲೀಗೆ ಮಂದಿ ಬಡಕೋತ ಬಡಕೋತ ತಮ್ಮ ಕುಡಿಗಳನ್ನ ಕುಂಡದಾಗ ನೆಟ್ಟು ಅವುಗಳಿಗೆ ಬರ್ಗರ್ ಪೀಜ್ಜಾಗಳನ್ನ ಮನದಣಿಯೇ ಉಣಿಸಿ ಕೋಲಾ, ಸೋಯಾ ಮಿಲ್ಕುಗಳನ್ನು ಎರೆದು ಕುಡಿಸಿ ತಂಪಾದ ನೆರಳಿನ್ಯಾಗ ಬಿಸಿಲು ಸೋಕದಹಾಂಗ ಬೆಳೆಸಿ, ಇನ್ ಡೋರ್ ಪ್ಲ್ಯಾಂಟುಗಳನ್ನಾಗಿ ಪರಿವರ್ತಿಸಿ ಸ್ವಲ್ಪ ಹೊತ್ತು ಹಾಂಗ, ಬೈಯ್ಯಲಾರದ ನೋಡಿಕೋರೀಪಾ ಅಂತ ಕಳಿಸಿರತಾರ. ರೊಕ್ಕಾ ಕೊಟ್ಟೋರೂ ತೊಗೊಂಡೋರೂ ರಾಜಿ... ನಡುವ ಏನ ಕೆಲಸ ಮಾಡಬೇಕ್ ನಮ್ಮ ಏಳು ಸುತ್ತಿನ ಮಲ್ಲಿಗೀ ತೂಕದ ಜಾಜಿ. ಇಂಥ ವೈಕುಂಠದಂಥಾ ಪವಿತ್ರ ಜಗಾದಾಗ ನಮ್ಮ ಕಥಾನಾಯಕಿ ಜಾಜಿ ಕನ್ನಡಾ ಟೀಚರ್. ಜಾಜಿ ಥಂದನೇ ಪ್ರಿಂಟೆಡ್ ಸಿಲ್ಕ್ ಸೀರಿ ಉಟಗೊಂಡು ತನ್ನ ನೇರ ಉದ್ದನೇ ಕೂದಲಾ ಸಡಿಲಾಗಿ ಹೆರಳು ಹಾಕಿಕೊಂಡು ಆ ಹೆರಳಿಗಿಷ್ಟು ಮಲ್ಲಿಗಿ ಮುಡಿದು ದಿನಾ ಸಾಲಿಗೆ ಬರತಾಳ. ಅತಿಲೋಕ ಸುಂದರಿಯಲ್ಲದಿದ್ದರೂ ಆಕೀ ಅಚ್ಚುಕಟ್ಟುತನ ಅಕೀನ್ನ ಇನ್ನೊಮ್ಮೆ ನೋಡೂ ಹಾಂಗ ಮಾಡತದ.

ಸಾಲೀ ಮೊದಲನೇ ಅಂದರ ನೆಲಬುರಕಿ ಹಂತದಾಗ ಆಫೀಸಿನ ಮಂದಿ ಕೂತಿರತಾರ. ದೇವರು ಕೊಟ್ಟರೂ ಪೂಜಾರಿ ಕೊಡ ಅನ್ನೂಗಾದೀ ಮಾತಿಗೆ ಸಜೀವ ಉದಾಹರಣೆಯಾಗಿ ಕೂತಿರತಾರ. ಹಂಗ ಮ್ಯಾಲೆ ಏರಿದರ ಮೊದಲನೇ ಸ್ಟಾಫ್ ರೂಮು. ಜಾಜಿಯ ಪ್ರಕಾರ ಈ ಸ್ಟಾಫ್ ರೂಮಿನ್ಯಾಗ ಇರೋವವರು ಆಕೆಯ ಅಕ್ಕ ತಂಗೇರು. ಯಾಕ ಅಂದ್ರ ಜಾಜಿ ಸಾಲಿಗೆ ಸೇರಿದಾಗ, ಮೊದಲನೇ ವರ್ಷ ಇದೇ ರೂಮಿನ್ಯಾಗ ಕೂಡತಿದ್ದಳು. ಈ ದೊಡ್ಡ ರೂಮು ಆಕೀಗೆ ತವರು ಮನಿ ಇದ್ದ ಹಾಂಗ. ಈ ಸಾಲ್ಯಾಗ, ನಾ ಇಲ್ಲೇ ಹುಟ್ಟಿದ್ದು ಅಂತ ಯಾವಾಗಲೂ ಹೆಮ್ಮೆಯಿಂದ ಹೇಳತಾಳ ಆಕಿ. ಈ ರೂಮಿನ್ಯಾಗ ಯಾವಾಗಲೂ ಏನರೆ ತಿನಲಿಕ್ಕೆ ಇದ್ದ ಇರತದ. ಯಾವಾಗಲೂ ಇಲ್ಲೆ ಬಂದು ಆಕಳದ ಹಾಂಗ ಏನರೆ ಮೇಯ್ದು, ಮೆಲಕು ಹಾಕ್ಕೋತ ಮ್ಯಾಲೆ ಹೋಗತಾಳ. ಹೊಗೋಕಿಂತ ಮುಂಚೆ ಇಲ್ಲಿನ ಅಕ್ಕ ತಂಗೇರಂಥಾ ಟೀಚರುಗಳು ಇಕೀಗೆ ತಮ್ಮ ಪಾಲಿನ ಛಾ ಕುಡಿಸಿ ಏನೇನರ ಜೋಕ್ಸ್ ಹೇಳಿ ನಗಸತಾರ. ಬಯಾಲಜೀ ಟೀಚರುಗಳು ತಮ್ಮ ಹುಡ್ರು ಬರೆದ ಅನಾಹುತ ಚಿತ್ರಗಳನ್ನ ನೋಡಿ ನೋಡಿ ಸದಾ ನಗತಿರತಾರ. ಸಾಯನ್ಸ್ ಟೀಚರ್ ಸುಗಂಧಿ ತನ್ನ ಕ್ಲಾಸಿನ ಹುಡುಗೊಂದು ಬರೆದ ಶ್ವಾಸಕೋಶದ ಚಿತ್ರ ಎಲ್ಲರಿಗೂ ತೋರಿಸಿ ಇದೇನೆಂದು ಹೇಳಿರೆಂದು ಎಲ್ಲರನ್ನೂ ಕೇಳಿ ಕೇಳಿ, ಅದನ್ನು ಅವರು ಬೇರೇನೋ ಎಂದು ತಿಳಿದು ಉತ್ತರ ಹೇಳಿದಾಗ ಬಿದ್ದೂ ಬಿದ್ದೂ ನಗುತ್ತಿದ್ದಳು. ಕಾರಣ ತಿಳಿದ ಜಾಜಿಯೂ ಮನದಣಿಯೇ ನಕ್ಕಳು. ಮೈಸೂರು ಮಲ್ಲಿಗೆಯಂಥ ಮೀರಾಳೂ ಆ ನಗುವಿನೊಳಗ ಪಾಲ್ಗೊಂಡಳು. ಈ ಸ್ಟಾಫ್ ರೂಮಿನ್ಯಾಗ ಮೈಸೂರು ಮಲ್ಲಿಗಿ ನಗುವುದಂದರ 'ನಕ್ಕಳಾ ರಾಜಕುಮಾರಿ' ಎನ್ನುವಷ್ಟು ಕೌತುಕ ಉಳಿದ ಹೂ ಮನಸುಗಳಿಗೆ. ಯಾವಾಗಲೂ ಬಿಂಕ ಬಿಗುಮಾನದಿಂದ ಇರುವ ಹೂವದು. ಈ ಮೈಸೂರು ಮಲ್ಲಿಗೆ ಬಹಳ ಸುಂದರಿ. ಕವಯಿತ್ರಿ, ಲೇಖಕಿ. ಸ್ವಲ್ಪ ಗಿಡ್ಡ ಅನಿಸಿದರೂ ಹಳೇ ಹಿಂದಿ ಹೀರೋಯಿನ್ ಮುಮತಾಜ್‌ನ ಹಾಂಗ ಅನಸತಿದ್ದಳು. ಮಾತೆಲ್ಲ ಅಪ್ಪಟ ಸುಂದರ ಮೈಸೂರು ಕನ್ನಡ. ಇಕೀಗೂ ಉಳಿದವರಿಗೂ ಅಷ್ಟಕ್ಕಷ್ಟ. ಈ ಗುಮ್ಮನ ಗುಸಕಿ ಸಹವಾಸನ ಬ್ಯಾಡಂತಿದ್ದರು. ಆದರೂ ಆ ಮಲ್ಲಿಗೀ ಮೀರಾ ತನ್ನದೇನರ ಹೆಚ್ಚುಗಾರಿಕಿ ಸದಾ ಹೇಳಿಕೊಳ್ಳಲಿಕ್ಕೇ ಬೇಕು. ಇಂಥಾ ಇಕೀಗೂ, ಅಕೀಯ ಹೆಜ್ಜೇನಿನಂಥ ಹೆಡ್ ಮಾಸ್ತರಿಣಿಗೂ ಎಣ್ಣೀ ಸೀಗಿ ಸಂಬಂಧ. ಇಬ್ಬರೂ ಒಂದ ವರ್ಷ ಡ್ಯೂಟಿಗೆ ಜಾಯಿನ್ ಆಗಿದ್ದರು. ಹೆಜ್ಜೇನು ತನ್ನ ಪರಿಶ್ರಮದಿಂದ ಮ್ಯಾಲೇರಿಕೋತ ಹೋಗಿ